ದಿನಾಂಕಃ **10.01.2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ :

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಸಂಗತಿಗಳು ಸತ್ಯವಾಗಿರುತ್ತವೆ ಮತ್ತು ಸಹಿ ನನ್ನದೇ ಇರುತ್ತದೆ.

ಮುಂದುವರೆದ ಮುಖ್ಯ ವಿಚಾರಣೆ : ವಾದಿಯ ಪರ ವಕೀಲರಿಂದಃ

ಕ್ರಯದ ಕರಾರು ಪತ್ರವನ್ನು ನಿಪಿ**1** ಎಂದು, ಪ್ರತಿವಾದಿಯ ಸಹಿಯನ್ನು ನಿಪಿ**1(ಎ)** ಮತ್ತು **(ಬಿ)** ಎಂದು, ಸಾಕ್ಷಿಗಳ ಸಹಿಗಳನ್ನು ನಿಪಿ**1(ಸಿ)** ಯಿಂದ **(ಇ)** ಎಂದು, ಪತ್ರ ಬರಹಗಾರರ ಸಹಿಯನ್ನು ನಿಪಿ**1(ಎಫ್)** ಎಂದು, ಸ. ನಂ. 185 ಸಿ ಪಹಣಿಗಳನ್ನು ಒಟ್ಟಾಗಿ ನಿಪಿ**2** ಎಂದು, ಸ. ನಂ. 185/2 ರ ಪಹಣಿಗಳನ್ನು ನಿಪಿ**3** ರಿಂದ ನಿಪಿ**5** ಎಂದು, ದೃಢೀಕೃತ ಕ್ರಯ ಪತ್ರವನ್ನುನಿಪಿ **6** ಎಂದು, ನೋಟೀಸಿನ ಕಚೇರಿ ಪ್ರತಿಯನ್ನು ನಿಪಿ**7** ಎಂದು, ಪ್ರತಿವಾದಿ ನೀಡಿದ ಉತ್ತರವನ್ನು ನಿಪಿ**8** ಎಂದು, ಅಂಚೆ ಸ್ವೀಕೃತಿ ನಿಪಿ**9** ಎಂದು, ಅಂಚೆ ರಸೀದಿಗಳು ನಿಪಿ**10** ಮತ್ತು ನಿಪಿ**11** ಎಂದು ಗುರುತಿಸಿತು.

ಪಾಟೀ ಸವಾಲು *:* ಪ್ರತಿವಾದಿಯ ಪರ ವಕೀಲರು ಸಮಯ ಕೋರಿದ್ದರಿಂದ ಮುಂದೂಡಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ).

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಹೂವಿನ ಹಡಗಲಿ.